ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 39-44
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಮತ್ತೆ ಕಲ್ಯಾಣ' : ವರ್ತಮಾನದ ನೆಲೆಗಟ್ಟಿನಲ್ಲಿ ಶರಣರ ಮೌಲ್ಯಗಳ ಮರುಚಿಂತನೆ

ಆಂಜನೇಯ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು

***Abstract:***

*ಬಂಡಾಯ ಸಾಹಿತಿ ಬಸವರಾಜ ಸಬರದರ 'ಮತ್ತೆ ಕಲ್ಯಾಣ' ನಾಟಕದಲ್ಲಿ ಮರುಚಿಂತಿಸಿದ ಹನ್ನೆರಡನೇ ಶತಮಾನದ ಶರಣರ ಚಳುವಳಿಯ ಮೂಲ ಮೌಲ್ಯಗಳಾದ ಸಮಾನತೆ, ಮಾನವತಾವಾದ, ಕಾಯಕ ಮತ್ತು ದಾಸೋಹ ತತ್ವಗಳು ವರ್ತಮಾನದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸನ್ನಿವೇಶಕ್ಕೂ ಹೇಗೆ ಪ್ರಸ್ತುತವಾಗಿವೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ನಾಟಕದಲ್ಲಿನ ಪಾತ್ರಗಳು ಮತ್ತು ಸನ್ನಿವೇಶಗಳ ಮೂಲಕ ಸಮಕಾಲೀನ ಸಮಾಜದಲ್ಲಿರುವ ಜಾತಿ ವ್ಯವಸ್ಥೆ, ಅಸಮಾನತೆ, ಅಧಿಕಾರ ರಾಜಕಾರಣ ಹಾಗೂ ಸಾಮಾಜಿಕ ಸಂಘರ್ಷಗಳನ್ನು ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ. ಸಾಹಿತ್ಯವು ಕೇವಲ ಗತಕಾಲದ ಇತಿಹಾಸವನ್ನು ಪುನರ್‌ಸೃಷ್ಟಿಸುವುದಕ್ಕಷ್ಟೇ ಸೀಮಿತವಾಗಿರದೆ, ವರ್ತಮಾನದ ಸಂಕೀರ್ಣ ಸಮಸ್ಯೆಗಳಿಗೆ ಪರ್ಯಾಯ ದೃಷ್ಟಿಕೋನ ಮತ್ತು ಪರಿಹಾರಗಳನ್ನು ನೀಡಬಲ್ಲ ಶಕ್ತಿಯುತ ಸಾಧನವಾಗಿದೆ ಎಂಬುದನ್ನು ಪ್ರತಿಪಾದಿಸುತ್ತಾ, ಶರಣ ಚಳುವಳಿಯ ಆಶಯಗಳನ್ನು ಆಧುನಿಕ ಸಮಾಜದ ಸವಾಲುಗಳೊಂದಿಗೆ ಹೋಲಿಸಿ, ಅವರ ಆದರ್ಶಗಳನ್ನು ಇಂದಿನ ಕಾಲಘಟ್ಟದಲ್ಲಿ ಮರುಚಿಂತನೆಗೆ ಒಳಪಡಿಸುವ 'ಮತ್ತೆ ಕಲ್ಯಾಣ' ನಾಟಕವನ್ನು ವಿಶ್ಲೇಷಿಸಲಾಗಿದೆ.*

***Keywords:*** *ಮತ್ತೆ ಕಲ್ಯಾಣ, ಶರಣರ ಚಳುವಳಿ, ಸಮಾಕಾಲೀನ ಸಮಾಜ, ಸಮಾನತೆ ಮತ್ತು ಮಾನವತಾವಾದ.*

## ಪೀಠಿಕೆ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನ ಮಹತ್ವದ ಕಾಲಘಟ್ಟ. ಅದು ಮುಂದಿನ ಕನ್ನಡ ಸಾಹಿತ್ಯ–ಚಳುವಳಿಯ ಮೇಲೆ ಗಮನೀಯವಾದ ಪ್ರಭಾವ ಬೀರಿದೆ. ಬಸವಣ್ಣನವರ ನಾಯಕತ್ವದಲ್ಲಿ ನಡೆದ ವಚನ ಚಳುವಳಿಯಿಂದ ಪ್ರೇರಿತವಾಗಿ ಚಳುವಳಿಯ ಆಶಯವನ್ನು ಸಾರುವ, ಶಿವಶರಣ ವ್ಯಕ್ತಿತ್ವವನ್ನು ಪರಿಚಯಿಸುವ ಅನೇಕ ಕಾವ್ಯ, ಕಾದಂಬರಿ, ನಾಟಕಗಳು ಕನ್ನಡ ಸಾಹಿತ್ಯದಲ್ಲಿ ರಚನೆಯಾಗಿವೆ.ಆದರಲ್ಲೂ ಕನ್ನಡ ನಾಟಕ ಸಾಹಿತ್ಯ, ಕಲ್ಯಾಣದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಕ್ರಾಂತಿಯನ್ನು ಸಶಕ್ತವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದೆ. ಜೀವಪರ ಒಲವುಳ್ಳ ವಚನ ಸಾಹಿತ್ಯದ ಆಶಯ, ನಿಲುವಯಗಳನ್ನು ಜನರ ಮುಂದೆ ತಂದಿಡುವ ಕಾರ್ಯ ನಿರಂತರವಾಗಿ ಸಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೇ ಶತಮಾನದಿಂದ ಈಚೆಗೆ ಗಮನಿಸ ಬಹುದಾದ ಶರಣರ ಕ್ರಾಂತಿಯ ಕುರಿತು ನಾಟಕಗಳಲ್ಲಿ ಸಿದ್ದಪ್ಪ ಕಡಿಯಿಂದ ರಚಿಸಿದ 'ಘಟ್ಟಿವಾಳಯ್ಯ(1901)' ಅಮರನಾಥ ಶಾಸ್ತ್ರಿಗಳು ರಚಿಸಿದ 'ಬಸವೇಶ್ವರ(1909), ಸಿದ್ಧರಾಮ (1924) ಅತ್ಯಂತ ಹಳೆಯ ನಾಟಕಗಳು. ಇವುಗಳನ್ನು 'ಶರಣರ ಹಳೆಯ ನಾಟಕಗಳು' ಎಂಬ ಹೆಸರಿನಲ್ಲಿ ಜಯಶ್ರೀ ದಂಡೆ ಮತ್ತು ವೀರಣ್ಣ ದಂಡೆ ಅವರು

***Please cite this article as:*** ಆಂಜನೇಯ. (2026). 'ಮತ್ತೆ ಕಲ್ಯಾಣ' : ವರ್ತಮಾನದ ನೆಲೆಗಟ್ಟಿನಲ್ಲಿ ಶರಣರ ಮೌಲ್ಯಗಳ ಮರುಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 39–44

ಸಂಪಾದಿಸಿದ್ದಾರೆ. ಅನಂತರದ ಗಮನೀಯ ಶರಣ ಚಳುವಳಿಯ ಕುರಿತ ನಾಟಗಳೆಂದರೆ ಅನಕೃರ 'ಜಗಜ್ಯೋತಿ ಬಸವೇಶ್ವರ'. ತರಳಬಾಳು ಶಿವಾಚಾರ್ಯರ 'ಮರಣವೇ ಮಹಾನವಮಿ', ಹೂಲಿ ಶೇಖರರ 'ಕಲ್ಯಾಣದಲ್ಲಿ ಒಂದು ಕ್ರಾಂತಿ', ಗಿರೀಶ್ ಕಾರ್ನಾಡರ 'ತಲೆದಂಡ', ಎಚ್.ಎಸ್.ಶಿವಪ್ರಕಾಶರ 'ಮಹಾಚೈತ್ರ', ಎಂ.ಎಂ.ಕಲಬುರ್ಗಿಯವರ 'ಕೆಟ್ಟಿತು ಕಲ್ಯಾಣ', ಲಂಕೇಶರ 'ಸಂಕ್ರಾಂತಿ', ಚಂದ್ರಶೇಖರ ಕಂಬಾರರ 'ಶಿವರಾತ್ರಿ', ನಟರಾಜ ಬೂದಾಳುರ 'ಕಲ್ಯಾಣದ ಬಾಗಿಲು', ಡಾ.ಎನ್.ಎಂ.ಗಿರಿಜಾಪತಿರ 'ಕೊನೆಯ ಮೂರು ರಾತ್ರಿಗಳು', ಮಹಾದೇವ ಬಣಕಾರರ 'ಕಲ್ಯಾಣ ಕ್ರಾಂತಿ', ವಿಕ್ರಮ ವಿಸಾಜಿಯವರ 'ಕಲ್ಯಾಣಪುರ' ಹಾಗೂ ಇತ್ತೀಚಿನ ಬಸವರಾಜ ಸಬರದರ 'ಮತ್ತೇ ಕಲ್ಯಾಣ' ಪ್ರಮುಖವಾದಗಳಾಗಿವೆ.

ಬಂಡಾಯ ಸಾಹಿತಿ ಬಸವರಾಜ ಸಬರದರು ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಅದರಿಂದ ಪ್ರಭಾವಿರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಶರಣ ಬದುಕನ್ನು ವಸ್ತುವಾಗಿಸಿಕೊಂಡು 'ಅಂಬಿಗ ನಿನ್ನ ನಂಬಿದೆ' ಮತ್ತು 'ಶಿವಯೋಗಿ ಸಿದ್ಧರಾಮ' 'ಕಾಯಕ ಯೋಗಿಗಳು' ಮತ್ತು 'ಮತ್ತೆ ಕಲ್ಯಾಣ' ಎಂಬ ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಇತ್ತೀಚಿಗೆ ಪ್ರಕಟಿಸಿದ 'ಮತ್ತೆ ಕಲ್ಯಾಣ' ಶರಣ ಚಳುವಳಿಯ ಕುರಿತ 23 ದೃಶ್ಯಗಳನ್ನು ಒಳಗೊಂಡ ನಾಟಕ. ಶರಣ ಚಳುವಳಿಯ ಬಿಜ್ಜಳನ ರಾಜಧಾನಿ 'ಕಲ್ಯಾಣ'ದಲ್ಲಿ ನಡೆದ ಕ್ರಾಂತಿಯನ್ನು ಮತ್ತೆ ವರ್ತಮಾನದ ಜೊತೆಗೆ ಮುಖಾಮುಖಿಯಾಗಿಸುವ ಕಾರ್ಯವಾಗಿದೆ. ನಾಟಕಕರು ಇತಿಹಾಸವನ್ನು ವರ್ತಮಾನದಲ್ಲಿಟ್ಟು ನೋಡುವ ಕ್ರಮವನ್ನು ಅನುಸರಿಸಿದ್ದಾರೆ.

ಶರಣರ ವಚನಗಳನ್ನೆ ಆಕರವಾಗಿ ಬಳಸಿ, ಕಲ್ಯಾಣದ ಚರಿತ್ರೆಯನ್ನು ನಾಟಕದಲ್ಲಿ ಕಟ್ಟಿಕೊಟ್ಟಿದ್ದಾರೆ. 'ಮತ್ತೆ ಕಲ್ಯಾಣ' ಎಂಬ ಹೆಸರು ಅವರ ಆಶಯದ ಧ್ವನಿಯಾಗಿದೆ. ಕಲ್ಯಾಣ ಎಂದರೆ ಶರಣರ ಕರ್ಮಭೂಮಿಯನ್ನು ತಿಳಿಸುವಂತೆ, ವಾಚ್ಯದಲ್ಲಿ 'ಮದುವೆ' ಎಂಬ ಅರ್ಥವನ್ನು ಸಂಕೇತಿಸುತ್ತದೆ. ಇಲ್ಲಿ 'ಮತ್ತೆ ಕಲ್ಯಾಣ' ಎಂಬುದನ್ನು ವಾಚ್ಯದಲ್ಲಿ ಹೇಳುತ್ತ 'ಎರಡನೇ ಮದುವೆ' ಎಂಬ ವ್ಯಂಗ್ಯಕ್ಕೆ ಒಳಗುಮಾಡಿ, ಶರಣರ ಕಾಲದಲ್ಲಿದ್ದ ಬಹುಪತ್ನಿತ್ವ ಪದ್ಧತಿಯನ್ನು ಪ್ರಶ್ನಿಸುತ್ತದೆ. ಅದರಲ್ಲಿ ವಚನ ಚಳುವಳಿಯ ಮುಂದಾಳು ಬಸವಣ್ಣನವರನ್ನು ಸಹಜವಾಗಿ ಪ್ರಶ್ನೆಗೆ ಒಡ್ಡುತ್ತದೆ. ಶರಣ ಚಳುವಳಿಯನ್ನು ಭಾವನಾತ್ಮಕವಾಗಿ ಚಿತ್ರಿಸದೆ, ವಿಮರ್ಶಾತ್ಮಕವಾಗಿ ನೋಡುತ್ತ ಅರಿವಿನ ಪರಧಿಯನ್ನು ವಿಸ್ತರಿಸುವ ಕಾರ್ಯವಾಗಿದೆ. ನಾಟಕಕ್ಕೆ ವಸ್ತುವಾಗಿ ಘಟನೆಗಳನ್ನು ಆಯ್ದುಕೊಂಡಿರುವುದು ಶರಣರ ಕುರಿತು ಪ್ರಚಲಿತದಲ್ಲಿರುವ, ಜನಜನಿತವಾದ ಘಟನೆಗಳೆ ಆಗಿವೆ. ಮುಕ್ತಾಯಕ್ಕ–ಅಜಗಣ್ಣ–ಅಲ್ಲಮರಿಗೆ ಸಂಬಂಧಿಸಿದಂತಿರುವ ಮುಕ್ತಾಯಕ್ಕೆ ಅಲ್ಲಮರ ಸಂವಾದ, ಸಿದ್ಧರಾಮ–ಅಲ್ಲಮರ ಸಂವಾದ, ಅಕ್ಕನ ಕಲ್ಯಾಣ ಪ್ರವೇಶ ಪ್ರಸಂಗ, ಅನುಭವ ಮಂಟಪದ ಚರ್ಚೆಗಳು, ಹರಳಯ್ಯನ ಮಗನ ಮದುವೆಯ ಪ್ರಸಂಗ ಇತ್ಯಾದಿಗಳು ಈಗಾಗಲೇ ವಚನ ಸಾಹಿತ್ಯ ಮತ್ತು ಚಳುವಳಿಯನ್ನು ಬಲ್ಲವರಿಗೆ ತಿಳಿದಿರುವ ಸಂಗತಿಗಳು. ಈ ಪ್ರಸಂಗಗಳನ್ನು ಮತ್ತೊಮ್ಮೆ ವಿಮರ್ಶಾತ್ಮಕವಾಗಿ ನಾಟಕದಲ್ಲಿ ಕಟ್ಟಿಕೊಡಲು ವಚನಗಳನ್ನೇ ಹೆಚ್ಚು ಆಶ್ರಯಿಸಿದ್ದಾರೆ.

'ಮತ್ತೆ ಕಲ್ಯಾಣ' ನಾಟಕದಲ್ಲಿ ಸೂತ್ರಧಾರ, ಸಂಗ್ಯಾ–ಗಂಗಿ, ಅಲ್ಲಮಪ್ರಭು, ಬಸವಣ್ಣ–ನೀಲಾಂಬಿಕೆ, ಬಿಜ್ಜಳ–ರಂಭಾವತಿ, ಚೆನ್ನಬಸವಣ್ಣ, ಮುಕ್ತಾಯಕ್ಕ, ಅಕ್ಕಮಹಾದೇವಿ, ಹಡಪದಪ್ಪಣ್ಣ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯ–ಕಲ್ಯಾಣಿ, ಮಧುವರಸ, ಅಕ್ಕನಾಗಮ್ಮ, ಕೊಂಡೆ ಮಂಚಣ್ಣ, ದಾಮೋದರಭಟ್ಟ, ಶೀಲವಂತ–ಕಲಾವತಿ, ಸೋವಿದೇವ ಮುಂತಾದ ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಕಲ್ಯಾಣದಲ್ಲಿ ನಡೆದ ಶರಣರ ಚಳುವಳಿಯನ್ನು ಮತ್ತೊಮ್ಮೆ ಕಣ್ಣಮುಂದೆ ತರುವ ನಾಟಕ 12ನೇ ಶತಮಾನದಿಂದ

ಪ್ರಾರಂಭವಾಗಿ 21 ಶತಮಾನದ ವಾಸ್ತವಿಕತೆಗೆ ಬಂದು ನಿಲ್ಲುತ್ತದೆ. ನಾಟಕದೊಳಗಿನ ಸಂವಾದಗಳು ಶೂನ್ಯಸಂಪಾದನೆಯಲ್ಲಿ ನಡೆದ ಸಂವಾದಗಳಿಗಿಂತ ಭಿನ್ನವಾಗಿವೆ. ಇಲ್ಲಿ ಅಲ್ಲಮನೆ ಪ್ರಶ್ನೆಗೆ ಒಳಗಾಗುವುದು ಹೊಸತನದಿಂದ ಕೂಡಿದೆ. ನಾಟಕ ಆರಂಭ ಮತ್ತು ಅಂತ್ಯ ಭಿನ್ನ ದಡದಲ್ಲಿ ನಿಂತಿವೆ. ಆಧ್ಯಾತ್ಮದ ಪ್ರಸಂಗದಿಂದ ಪ್ರಾರಂಭವಾದ ನಾಟಕ ಕೆಂಪು ಬಾವುಟವನ್ನು ಎತ್ತಿಹಿಡಿದು "ಕಟ್ಟತೇವ ನಾವು ಕಟ್ಟುತೇವ ನಾವು ಕಟ್ಟೇ ಕಟ್ಟುತೇವ; ಕೆಟ್ಟು ಹೋದ ಕಲ್ಯಾಣವನ್ನು ಮತ್ತೆ ಕಟ್ಟುತೇವ" ಎಂಬ ಕ್ರಾಂತಿಗೀತೆಯ ಆಶಯದ ಮೂಲಕ ಕೊನೆಗೊಳ್ಳುತ್ತದೆ.

ನಾಟಕದ ಒಂದನೇ ದೃಶ್ಯ ಸೂತ್ರಧಾರ, ಸಂಗ್ಯಾನ ಮಾತುಕತೆಯಿಂದ ಆರಂಭವಾಗಿ 'ಮತ್ತೆ ಕಲ್ಯಾಣ' ಶೀರ್ಷಿಕೆಯ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ಎರಡನೇ ದೃಶ್ಯದಲ್ಲಿ ಲಕ್ಕುಂಡಿಯ ದೃಶ್ಯ. ಇಲ್ಲಿ ಅಲ್ಲಮ – ಮುಕ್ತಾಯಕ್ಕಳ ಸಂವಾದವಿದೆ. ಮುಕ್ತಾಯಕ್ಕನ ಅಪಾರಜ್ಞಾನಕ್ಕೆ ಅಲ್ಲಮ ತಲೆಬಾಗುತ್ತಾನೆ.

"ಅಲ್ಲಮಪ್ರಭು: ನೀನು ಸಾಮಾನ್ಯ ಮಹಿಳೆಯೆಂದು ತಿಳಿದು ನಾನು ಬೋಧಿಸಲು ಹೋದೆ: ನೀನು ಸಾಮಾನ್ಯಳಲ್ಲ. ತಾಯೆ! ನೀನು ದುಃಖಿತಳೆಂದು ಸಾಂತ್ವಾನ ಹೇಳಲು ಬಂದಿದ್ದೆ, ನೀನು ದುಃಖಿತಳಲ್ಲ ತಾಯೆ! ನಾನು ನಾನು ಎಂಬುದು ನನ್ನೊಳಗೆ ಮನೆ ಮಾಡಿತ್ತು. ಅದನ್ನು ಕ್ಷಣಾರ್ಧದಲ್ಲಿ ಅಳಿಸಿ ಹಾಕಿದ. ನೀನೇ ನನ್ನ ಗುರುವು ತಾಯೆ!

ಮುಕ್ತಾಯಕ್ಕ: ಹಾಗೆನ್ನಬೇಡಿ ಪ್ರಭುವೆ! ನಾನಳಿದು ನೀನಾದ ಬಳಿಕ ಭೇದವೆಂಬುದುಂಟೆ. ನೀರಲ್ಲಿ ನೀರು ಬೆರೆತಾಗ ಬೇರೆಂಬುದುಂಟೆ? ತಾವು ಮಹಾಮಹಿಮರು, ದೊಡ್ಡ ಅನುಭಾವಿಗಳು, ನನ್ನಂತಹ ಕಿರಿಯಳ ನುಡಿಗಳಿಗೆ ಉತ್ತರಿಸಿದಿರೆಲ್ಲ ಸಂತೋಷವಾಯಿತು ನನಗೆ.

ಅಲ್ಲಮಪ್ರಭು : ಯಾರಿಗೂ ಏನೂ ಗೊತ್ತಿಲ್ಲವೆಂದು ಬೋಧನೆ ಮಾಡುತ್ತಾ ಹೋದೆ. ನಿನ್ನ ನುಡಿಗಳಿಂದ ನನ್ನೊಳಗೆ ನಾನೇ ಹುಡುಕಿಕೊಂಡೆ. ಮಹಾ ಅನುಭಾವಿಯಾದ ನಿನಗೆ ನಮೋ ನಮೋ ಎಂಬೆನು ತಾಯೆ!"[1] ಇಲ್ಲಿನ ಸಂಭಾಷಣೆ ಮುಕ್ತಾಯಕ್ಕ ಜ್ಞಾನದ ಅರಿವಿನ ಜತೆಗೆ ಅಲ್ಲಮನ ಆತ್ಮವಿಮರ್ಶೆಗೆ ನಿದರ್ಶನವಾಗಿದೆ. ಮುಂದಿನ ದೃಶ್ಯದಲ್ಲಿ ಅಲ್ಲಮ ಸಿದ್ಧರಾಮ ಸಂಭಾಷಣೆವಿದೆ. ಇಲ್ಲಿಯೂ ಅಲ್ಲಮನು ಪ್ರಶ್ನೆಗೆ ಒಳಗಾಗುತ್ತಾನೆ. ಸಿದ್ಧರಾಮನು "ಶಿವಶರಣರಾದವರಲ್ಲಿ ಕೋಪವಿರಬಾರದು ಪ್ರಭುವೆ. ತನ್ನೊಡಲೊಳಗಣ ಕಿಚ್ಚು, ತನ್ನ ಸುಟ್ಟಲ್ಲದೆ ಅನ್ಯರನು ಸುಡುವುದೆ?"[2] ಎಂದು ಕೇಳುವುದು. ಮಹಾಜ್ಞಾನಿಗಳು ಸಹ ಪ್ರಶ್ನಾರ್ಹರರು ಎಂಬ ನಿಲುವು ಪ್ರಕಟವಾಗಿದೆ. ಶೂನ್ಯ ಸಂಪಾದನೆಯಲ್ಲಿ ಅಲ್ಲಮಪ್ರಭು ಎಲ್ಲ ಶಿವಶರಣರನ್ನು ತನ್ನ ಜ್ಞಾನದ ಬಲದಿಂದ ಪರೀಕ್ಷೆ ಮಾಡಿ, ಉಪದೇಶ ನೀಡಿದರೇ ಈ ನಾಟಕದ ಒಳಗೆ ಆತನೆ ಪ್ರಶ್ನೆಗೆ ಒಳಗಾಗುತ್ತಾನೆ.

ಅನಂತರ ದೃಶ್ಯದಲ್ಲಿ ಅನುಭವ ಮಂಟಪದ ಚರ್ಚೆಯ ವಿಷಯವಿದೆ. ಬಸವಣ್ಣನ ಆದಿಯಾಗಿ ಎಲ್ಲ ಕಾಯಕಜೀವಿಗಳು ಸೇರಿ ಸಮಾಜ ವ್ಯವಸ್ಥೆಯಲ್ಲಿನ ಮೌಢ್ಯತೆ, ಜಾತೀಯತೆ, ಲಿಂಗ–ವರ್ಗ–ವರ್ಣ ಅಸಮಾನತೆಗಳ ಕುರಿತು ಮತ್ತು ಚಾತುರ್ವರ್ಣ ವ್ಯವಸ್ಥೆಯ ಅನಾಹುತಗಳ ಬಗ್ಗೆ ಚರ್ಚಿಸಿ ಅಸಮಾನತೆಯನ್ನು ಹೊಡೆದೊಡಿಸುವ ವಿಚಾರಗಳನ್ನು ಮಾಡುತ್ತಾರೆ.

ಇನ್ನೊಂದು ಕಡೆ ಕೊಂಡೆ ಮಂಚಣ್ಣ, ಲಲಾಟಯ್ಯ, ದಾಮೋದರಭಟ್ಟ ಮುಂತಾದ ಸಂಪ್ರದಾಯವದಿಗಳು ಎಲ್ಲ ಅಸಮಾನತೆಯನ್ನು ಪೋಷಿಸಿ ಉಳಿಸಿಕೊಂಡು ಹೋಗಲು ಹುನ್ನಾರು ಮಾಡುತ್ತಾರೆ. ಆದರ ಭಾಗವಾಗಿ ಕಲ್ಯಾಣದ ಯುವರಾಜ ಸೋವಿದೇವವನ್ನು ತಮ್ಮತ್ತ ಸೆಳೆದು ಶರಣ ಚಳುವಳಿಯನ್ನು ಕುಗ್ಗಿಸುವ ಮತ್ತು ನಾಶಗೊಳಿಸುವ ಪ್ರಯತ್ನಿಸುತ್ತಾರೆ. ಅಂತಹ ಸಮಯದಲ್ಲೂ ಬಸವಣ್ಣ ತನ್ನ ನುಡಿಗೆ ಬದ್ಧವಾದ ನಡೆಯನ್ನು ಪ್ರದರ್ಶಿ ಆಡುವ ಮಾತು "ನಾವೀಗ ಈ

ಮದುವೆ ಮಾಡದಿದ್ದರೆ ಅಸ್ಪೃಶ್ಯರು ನಮ್ಮನ್ನು ನಂಬುವುದಿಲ್ಲ. ನಮ್ಮ ಚಳವಳಿ ಕೇವಲ ಪ್ರಚಾರದ್ದು ಎಂದುಕೊಳ್ಳುತ್ತಾರೆ. ಮದುವೆ ಮಾಡಿದರೆ ಮಡಿವಂತರು ಮತ್ತು ಪ್ರಭುತ್ವ ನಮ್ಮ ಮೇಲೆ ತಿರುಗಿ ಬೀಳಬಹುದು. ನನಗೆ ಮಂತ್ರಿಯಾಗಿ ಮುಂದುವರಿಯಬೇಕೆಂಬ ಆಸೆಯೂ ಇಲ್ಲ. ನಮ್ಮ ಸಿದ್ಧಾಂತಕ್ಕೆ ನಾವು ಬದ್ಧರಾಗಿರೋಣ, ಹರಳಯ್ಯ ಮಾಧುವರಸರೆ ಮದುವೆಯ ಸಿದ್ಧತೆಯನ್ನು ಮಾಡಿಕೊಳ್ಳಿ, ಶರಣರಿಗೆ ಮರಣವೇ ಮಹಾನವಮಿ, ಬಂದದ್ದನ್ನು ಎದುರಿಸೋಣ"**3** ಎಂಬ ನಿರ್ಣಾಯಕ ಮಾತುಗಳನ್ನು ಒಬ್ಬ ಸಾಂಸ್ಕೃತಿಕ ನಾಯಕನಾಗಿ ಹೇಳುತ್ತಾರೆ. ಎಲ್ಲ ಶರಣರು ತಮ್ಮ ಮಾತಿಗೆ ಕಟಿಬದ್ಧವಾಗಿ ನಿಂತುಕೊಂಡು 'ಶೀಲವಂತ–ಕಲಾವತಿ'ಯ ಮದುವೆಯನ್ನು ಮಾಡಿಸುತ್ತಾರೆ. ಆದರೆ ಮತೀಯವಾದಿ, ಜಾತಿವಾದಿಗಳು 'ಶೀಲವಂತ–ಕಲಾವತಿ'ಯ ಮದುವೆ ಮತ್ತು ಸೋವಿದೇವನ ದೌರ್ಬಲ್ಯಗಳನ್ನು ದಾಳವಾಗಿಸಿಕೊಂಡು. ಬಿಜ್ಜಳನನ್ನು ಗೃಹಬಂಧನದಲ್ಲಿರಿಸಿ ಶರಣಚಳುವಳಿಯನ್ನು ವಿಫಲಗೊಳಿಸುತ್ತಾರೆ.ಬದಲಾವಣೆಗೆ ಅಡ್ಡಿಯಾಗುತ್ತಾರೆ. ಅಂತ ಮನಸ್ಥಿತಿಯ ಸಂಪ್ರದಾಯವಾದಿಗಳು, ಪಿತೂರಿ ಮಾಡುವ ಪುರೋಹಿತಶಾಹಿ ವರ್ಗ ಎಲ್ಲ ಕಾಲದಲ್ಲಿಯೂ, ಅಧಿಕಾರದ ಗದ್ದುಗೆ ಹತ್ತಿರದಲ್ಲಿದ್ದೇ ಎಲ್ಲವನ್ನು ಸಾಧಿಸಿಕೊಳ್ಳುತ್ತದೆ ಎಂಬುವುದನ್ನು ಹೇಳುತ್ತ, ಬರೆಯುವ ಲೇಖನಿ ತಲೆತಲಾಂತರದಿಂದ ಅಕ್ಷರವನ್ನು ಗುತ್ತಿಗೆ ಹಿಡಿದ ವರ್ಣದವರದಾಗಿದ್ದು, ಅವರು ಹೇಳಿದಂತೆ ತಲೆ ಆಡಿಸುವವ ವಿವೇಚನೆವಿಲ್ಲದ ಶೂದ್ರರಿಂದ ನಮ್ಮ ಚಳುವಳಿಗಳು ನಾಶವಾಗುತ್ತಿವೆ ಎಂಬ ಎಚ್ಚರಿಕೆಯ ಸಂದೇಶವೂ ಇದೆ.

ಈ ನಾಟಕದ ಮುನ್ನುಡಿಯಲ್ಲಿ ಎಸ್.ಜಿ.ಸಿದ್ದರಾಮಯ್ಯ ಸವಿಸ್ತಾರವಾಗಿ ಹೀಗೆ ವಿಶ್ಲೇಷಿಸಿದ್ದಾರೆ. "ಕ್ರಾಂತಿಪೂರ್ವದ ಶರಣ ಚಳವಳಿಯ ಅರಿವಿನ ವಿಸ್ತಾರದ ನಿರೂಪಣೆ ನಾಟಕದಲ್ಲಿ ಅಡಿಪಾಯದ ರೂಪದಲ್ಲಿ ಬಂದಿದೆ. ಇದರ ಮೇಲೆ ಕ್ರಾಂತಿಯ ಬೆಳವಣಿಗೆಯನ್ನು ಬೆಳಸಿದ್ದಾರೆ. ಅದೇ ಪ್ರತಿಲೋಮ ವಿವಾಹದ ಘಟನೆ. ಹರಳಯ್ಯ–ಯಧುವರಸರ ಮಗ–ಮಗಳು ಇವರ ಪ್ರೇಮವಿವಾಹದ ಘಟನೆ. ಇದನ್ನು ಮರುನಿರೂಪಿಸುವಾಗ ಕೌಟುಂಬಿಕ ಸಮಸ್ಯೆಯೊಂದು ಸಾಮಾಜಿಕ ಪ್ರತಿರೋಧಕ್ಕೆ ಕಾರಣವಾಗುವಾಗು ಆ ಕುಟುಂಬದ ಹಿರಿಯರ ಆತಂಕ, ಭಯ, ಹೇಗೆ ಮೂರ್ತ ರೂಪ ಪಡೆಯುತ್ತದೆ, ಅವರು ಹೇಗೆ ಅದರ ಪರಿಹಾರಕ್ಕೆ ಉಪಾಯಗಳನ್ನು ಹುಡುಕತೊಡಗುತ್ತಾರೆ ಇವೆಲ್ಲವೂ ನಾಟಕದಲ್ಲಿ ಹೆಚ್ಚು ವಾಸ್ತವಿಕತೆಯಿಂದ ಮೂಡಿಬಂದಿದೆ. ಬಸವಣ್ಣನವರ ಮನೆಗೆ ಹರಳಯ್ಯ–ಕಲ್ಯಾಣಮ್ಮ ದಂಪತಿಗಳು ಬಂದು ವಿಷಯ ಪ್ರಸ್ತಾಪಿಸುವುದು, ಆ ನಂತರ ಬಸವಣ್ಣನವರು ಅನುಭವ ಮಂಟಪದ ಅಧ್ಯಕ್ಷ ಅಲ್ಲಮಪ್ರಭುವನ್ನು ಭೇಟಿಯಾಗಿ ಚರ್ಚಿಸುವುದು ಇವೆಲ್ಲವೂ ಸಹಜ ಚಿತ್ರಗಳಾಗಿ ಮರುನಿರೂಪಣೆಗೊಂಡಿವೆ. ಅಷ್ಟೇ ಮಟ್ಟಿಗೆ ಪುರೋಹಿತಶಾಹಿಯ ಷಡ್ಯಂತ್ರ ಶರಣ ಚಳವಳಿಯ ವಿರುದ್ಧ ಹೇಗೆ ಕುತಂತ್ರಗಾರಿಕೆಯನ್ನು ಮೆರೆಯಿತು ಎಂಬುದು ಸಮರ್ಥವಾಗಿ ಬಂದಿದೆ. ಬಿಜ್ಜಳನ ಮಗ ಸೋವಿದೇವನ ಮದ್ಯವ್ಯಸನದ ದೌರ್ಬಲ್ಯವನ್ನು ಬಳಸಿಕೊಂಡು ಅವನನ್ನು ಬಸವಣ್ಣನ ವಿರುದ್ಧ ಎತ್ತಿಕಟ್ಟುತ್ತಾರೆ. ಕೊನೆಗೆ ಅಪ್ಪನ ವಿರುದ್ಧವೇ ಎತ್ತಿಕಟ್ಟುತ್ತಾರೆ.

ಈ ಷಡ್ಯಂತ್ರ ಈ ದೇಶದ ಎಲ್ಲ ರಾಜರುಗಳ ಕಾಲಘಟ್ಟದಲ್ಲೂ ಒಂದಲ್ಲ ಒಂದು ಬಗೆಯಲ್ಲಿ ನಡೆದಿರುವ ಪುರೋಹಿತಶಾಹಿ ಪಿತೂರಿಯ ಭಾಗವೇ ಆಗಿದೆ. ಶರಣ ಚಳವಳಿಯನ್ನು ನಾಶ ಮಾಡಿದ ಪುರೋಹಿತಶಾಹಿಯ ಪಿತೂರಿಯನ್ನು ಇಲ್ಲಿ ಮಾರ್ಮಿಕವಾಗಿ ತಂದಿದ್ದಾರೆ. ಈಗಿನ ರಾಜಕಾರಣದ ಹಿಂದಿನ ಸೂತ್ರಧಾರೀ ಪಾತ್ರಗಳನ್ನು ನೆನಪಿಗೆ ತರುವಂತೆ ದೃಶ್ಯಭಾಗವನ್ನು ಕಟ್ಟಿದ್ದಾರೆ. ಪಿತೂರಿಗಾರರು ಒಂದೆಡೆ ಕಲೆತು ಬಸವಣ್ಣನ ಮೇಲೆ

ಖಜಾನೆಯ ಹಣ ದುರುಪಯೋಗದ ಆರೋಪ, ಭ್ರಷ್ಟಾಚಾರದ ಆರೋಪ ಹೊರಿಸುತ್ತಾರೆ. ಪ್ರಭುತ್ವ ಹಾಗೂ ಪ್ರಜಾಪ್ರಭುತ್ವ ಎಲ್ಲಾ ಕಾಲದಲ್ಲೂ ಆಡಳಿತಗಾರನಿಗೆ ಬಹುಬೇಗ ಅಂಟಿಕೊಳ್ಳುವ ಆರೋಪ, ಭ್ರಷ್ಟಾಚಾರದ ಹಣ ದುರುಪಯೋಗದ ಆರೋಪ, ಬಸವಣ್ಣನ ನಿತ್ಯ ದಾಸೋಹದ ಪರಿಕಲ್ಪನೆಯ ನಡೆಗೂ ಈ ಹಣ ದುರುಪಯೋಗದ ನಡೆಗೂ ಗಂಟು ಹಾಕಿ ತಪ್ಪು ಹೊರೆಸುವ ಷಡ್ಯಂತ್ರವನ್ನು ಪುರೋಹಿತಶಾಹಿ ರೂಪಿಸುತ್ತದೆ. ವಿವೇಚನಾರಹಿತ ಭಾವುಕ ಮನಸ್ಸುಗಳು ಬಹುಬೇಗ ನಂಬಬಹುದಾದ ಈ ಮಾರ್ಗ ಎಲ್ಲ ಕಾಲದ ಪಿತೂರಿಗಳು ಹೆಣೆದ ಜಾಲವೇ ಆಗಿದೆ. ಇಂಥ ಸನ್ನಿವೇಶಗಳ ನಿರ್ಮಾಣದಲ್ಲಿ ನಾಟಕಕಾರರು ಬಳಸುವ ಸಂಭಾಷಣೆಯ ಭಾಷೆ ವಚನ ಧಾಟಿಯಾದಾಗದೆ ಸಹಜ ಶೈಲಿಯ ವರ್ಣಶ್ರೇಷ್ಠತೆಯ ಪಿತೂರಿ ಭಾಷೆಯೇ ಆಗಿದೆ. ಮಿಕ್ಕಂತೆ ನಾಟಕದಲ್ಲಿ ಬಸವಣ್ಣ–ಅಲ್ಲಮ, ಅಲ್ಲಮ–ಸಿದ್ದರಾಮ. ಈ ಪರಿಯ ಶರಣರ ಸಂಭಾಷಣೆಯಲ್ಲಿ ವಚನದ ಬೆಡಗು ಭಾಷೆಯೇ ಗದ್ಯಗಂಧೀ ಗುಣದಿಂದ ಬಳಕೆಯಾಗಿದೆ. ಹೀಗಾಗಿ ಇಡೀ ನಾಟಕ ಕಾವ್ಯಾತ್ಮಕ ಓಘದಲ್ಲಿ ಓದಿಸಿಕೊಂಡು ಹೋಗುತ್ತದೆ.

ಆರೋಪಿ ಬಸವಣ್ಣನಿಲ್ಲದ ಪಿರ್ಯಾದುದಾರ ಸೋವಿದೇವನಿಲ್ಲದ ಸಭೆಯಲ್ಲಿ ಬಿಜ್ಜಳ ರಾಜನಿಗೆ ಬಸವಣ್ಣನ ವಿರುದ್ಧ ದೂರು ದಾಖಲಾಗುತ್ತದೆ. ಇಂಥ ತಂತ್ರಗಾರಿಕೆಗಳು ಹಿಂದಿನಿಂದಲೂ ನಡೆದು ಬಂದವು. ಅಷ್ಟೇ ಅಲ್ಲ ಇಂದಿಗೂ ನಡೆಯುತ್ತಿರುವ ಪುರೋಹಿತ ಬುದ್ಧಿಯ ಕುತಂತ್ರಗಾರಿಕೆಗಳೇ ಆಗಿವೆ.

ಬಿಜ್ಜಳನ ಕೌಟುಂಬಿಕ ಜೀವನದ ಚಿತ್ರಣ ಇಂದಿನ ಶಾಸಕರು/ಸಚಿವರು ಅವರ ದಾರಿ ತಪ್ಪಿದ ಮಗ ಅವನನ್ನು ಕುರಿತು ತಂದೆಯಾದವನು ಹೆಂಡತಿಯೊಂದಿಗೆ ದೂರು ಹೇಳುತ್ತಾ ಎಚ್ಚರಿಕೆ ಕೊಡುವ ಮಾತುಗಳು – ಹೀಗೆ ಇಡೀ ಸನ್ನಿವೇಶ ಚರಿತ್ರೆ ವರ್ತಮಾನಗಳ ವಾಸ್ತವದ ಚಿತ್ರಣವಾಗಿದೆ. ಅಪ್ಪನ ಆತಂಕ. ಮಗನ ಉಡಾಳತನದ ಉಡಾಫೆ ಮಾತುಗಳು ರಾಜ್ಯ ರಾಜಕಾರಣ ಎಲ್ಲೆಲ್ಲಿ ತನ್ನ ಬಾಹುಗಳನ್ನು ಚಾಚಿದಂತೆ ಬೆಳೆಯುತ್ತದೆ. ಯಾವೆಲ್ಲ ಆಯಾಮಗಳಲ್ಲಿ ಸಂಘರ್ಷಮುಖಿಯಾಗುತ್ತದೆ ಎಂಬುದನ್ನು ಇಂಥ ದೃಶ್ಯಗಳು ಸೂಕ್ಷ್ಮವಾಗಿ ನಿರೀಕ್ಷಿಸಿವೆ. ಬಿಜ್ಜಳ–ಬಸವಣ್ಣನವರ ಸಂಬಂಧ ಕೇವಲ ರಾಜ–ಮಂತ್ರಿಯ ಆಡಳಿತಾತ್ಮಕ ಸಂಬಂಧವಾಗಿರದೆ ಪಂಪ–ಅರಿಕೇಸರಿಯ ಸ್ನೇಹ ಸಂಬಂಧವನ್ನು ನೆನಪಿಸುವಂತೆ ಮೂಡಿಬಂದಿದೆ. ಇವರ ಮಾತುಗಳಲ್ಲಿ ಮನುಧರ್ಮದ ಸಂಪ್ರದಾಯವಾದಿ ಕರ್ಮತತ್ವದ ಬಿಗಿ ಹಿಡಿತ ಎಷ್ಟು ಬಲಿಷ್ಠವಾದುದು ಎಂಬುದು ಅರಿವಿಗೆ ಬರುತ್ತದೆ. ಇಬ್ಬರಿಗೂ ಕಲಾವತಿ ಶೀಲವಂತರ ಮದುವೆಗೆ ಮನಸ್ಸಿದ್ದರೂ ಇಬ್ಬರೂ ಅಸಹಾಯಕರಾಗಿರುವುದು ಈ ದೇಶದ ಮೂರುವರೆ ಸಾವಿರ ವರ್ಷಗಳ ಸಾಂಸ್ಕೃತಿಕ ದಬ್ಬಾಳಿಕೆಯ ವಾಸ್ತವತೆಯನ್ನು ಮನಗಾಣಿಸುತ್ತದೆ."[4] ಎಂದು ಅಭಿಪ್ರಾಯ ಪಡುತ್ತಾರೆ.

ಸಬರದರ 'ಮತ್ತೆ ಕಲ್ಯಾಣ' ನಾಟಕ ಸಂಪ್ರದಾಯದ ಅಂದಾನುಕರಣೆ ಶರಣರ ಸಾಮಾಜಿಕ, ಧಾರ್ಮಿಕ ಚಳುವಳಿಗೆ ಅಡ್ಡಿಯಾದ ವಿಘ್ನಗಳಾವು ಎಂಬುದರ ಮೇಲೆ ಬೆಳಕು ಚೆಲ್ಲುತ್ತಲೇ, ಅಂತಹ ಜಿಡ್ಡುಗಟ್ಟಿದ ಸಂಪ್ರದಾಯವಾದಿ, ಜಾತಿವಾದಿ ಮನಸ್ಥಿತಿಗಳು ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಮೆರೆದಾಡುತ್ತಿವೆ. ಇಂದು ಪ್ರಜಾಪ್ರಭುತ್ವ ಮತ್ತು ಸಂವಿಧಾನ ಅಡಿಯಲ್ಲಿ ಬದುಕು ಸಾಗಿಸುತ್ತಿದ್ದರು, ಈ ಶತಮಾನದಲ್ಲಿಯೂ ಮರ್ಯಾದೆ ಹತ್ಯೆ, ಮಹಿಳಾ ಮೇಲೆ ಅತ್ಯಾಚಾರ, ಭ್ರಷ್ಟಾಚಾರಗಳು, ಜಾತಿ ಅಸಮಾನತೆಗಳು ನರ್ತನೆಯನ್ನು ಕಂಡು ಧಿಕ್ಕರಿಸುತ್ತಾರೆ.

ನಾಟಕದ ಕೊನೆಯ ದೃಶ್ಯದಲ್ಲಿ ಸೂತ್ರಧಾರನ ಮಾತುಗಳಲ್ಲಿ ಕಲ್ಯಾಣದಲ್ಲಿ ನಡೆದ ಹತ್ಯಾಕಾಂಡ, ಸೈನಿಕರ ಕೌರ್ಯಕ್ಕೆ ಶರಣರು ದಿಕ್ಕು ಪಾಲಾಗುವುದು, ಮದುವೆಯಾಗಿ ಸುಖದಿಂದ ಬಾಳಬೇಕಿದ್ದ ಶೀಲವಂತ–ಕಲಾವತಿ ಮತ್ತವರ ತಂದೆ–ತಾಯಿಗಳು ಹೆಣವಾದದು, ಶರಣರು ತಾವು ಬರೆದ ವಚನ

ಕಟ್ಟುಗಳನ್ನು ಹೊತ್ತುಕೊಂಡು ಬೇರೆ ಬೇರೆ ಊರಿಗೆ ಹೊರಟು ಹೋದ ವೇದನೆಯ ಕಥೆ ತಿಳಿಯುತ್ತದೆ. ಆದರೆ ಮತ್ತೊಂದು ಕಡೆ ಹೋರಾಟಗಾರರು ಕಲ್ಯಾಣದಲ್ಲಿ ನಡೆದ ಅನ್ಯಾಯ ಮತ್ತು ಶರಣರ ಹತ್ಯಾಕಾಂಡವನ್ನು ವಿರೋಧಿಸುವುದು ಆಶಾದಾಯಕ ಬೆಳವಣಿಗೆಯಾಗಿದೆ. ಹೋರಾಟಗಾರರು ಕ್ರಾಂತಿಗೀತೆಯ ಮೂಲಕ ಸಾರಿ ಹೇಳುತ್ತಾರೆ.

> ***"ಕಟ್ಟುತೇವ ನಾವು ಕಟ್ಟುತೇವ ನಾವು ಕಟ್ಟೇ ಕಟ್ಟುತೇವ***
> ***ಕೆಟ್ಟು ಹೋದ ಕಲ್ಯಾಣವನ್ನು ನಾವು ಮತ್ತೆ ಕಟ್ಟುತೇವ***
> ***ಜಾತಿಯಿಲ್ಲದ–ಭೀತಿಯಿಲ್ಲದ ನಾಡ ಕಟ್ಟುತೇವ***
> ***ಮೇಲಿಲ್ಲ ಕೀಳಿಲ್ಲದ ರಾಜ್ಯ ಕಟ್ಟುತೇವ***
> ***ಹತ್ಯಾಕಾಂಡ ವಿರೋಧಿಸಿ ನಾವು ಎದ್ದು ನಿಲ್ಲುತೇವ***
> ***ಸನಾತನಿಗಳ ವಿರೋಧಿಸಿ ಹೋರಾಟ ಕಟ್ಟುತೇವ***
> ***ಕಟ್ಟುತೇವ ನಾವು ಕಟ್ಟುತೇವ ನಾವು ಕಟ್ಟೇ ಕಟ್ಟುತೇವ***
> ***ಕೆಟ್ಟು ಹೋದ ಕಲ್ಯಾಣವನ್ನು ನಾವು ಮತ್ತೆ ಕಟ್ಟುತೇವ"***[5]

ಎಂಬ ಕ್ರಾಂತಿಗೀತೆಯ ಮೂಲಕ ಶರಣರ ಮೇಲೆ ನಡೆದ ದೌರ್ಜನ್ಯವನ್ನು ಖಂಡಿಸುತ್ತಾರೆ. ಕಲ್ಯಾಣದ ಶರಣರ ಹತ್ಯಾಕಾಂಡವನ್ನು ಪ್ರತಿಭಟಿಸುವವರು, ಧಿಕ್ಕರಿಸುವರು ಅಂದೂ–ಇಂದು ಈ ನಾಡಿನಲ್ಲಿರುವುದು ಸಮಾಧಾನದ ಸಂಗತಿ.

**ಉಪಸಂಹಾರ**

ಇಂದು ನಮ್ಮ ನಡುವೆ ತಂಡವಾಡುತ್ತಿರುವ ಜಾತೀಯ ಅಸಮಾನತೆ, ತಾರತಮ್ಯ, ಸಂಪ್ರದಾಯಗಳ ಬಲವಂತದ ಹೇರಿಕೆಯನ್ನು ದಿಕ್ಕರಿಸಿ ಸಮಾಜವನ್ನು ವೈಚಾರಿಕವಾಗಿ, ಸಮಾನತೆಯ ನೆಲೆಯಲ್ಲಿ ಕಟ್ಟುವುದಕ್ಕೆ ಹೋರಾಟ ಅನಿವಾರ್ಯ. ಸಮಸಮಾಜಕ್ಕೆ ಮಾರಕವಾಗಿರುವ ಅಸಮಾನತೆಯ ಭೂತವನ್ನು ಹೊಡೆದೊಡಿಸಲು ಶರಣ ಚಳುವಳಿಯೇ ಆದರ್ಶವಾಗಬೇಕು, ಕ್ರಾಂತಿಯ ಕಹಳೆ ಮೊಳಗಬೇಕು. ಶರಣರ 'ಮರಣವೇ ಮಹಾನವಮಿ' ಎಂಬ ಗಟ್ಟಿತನ, ನಡೆ ನುಡಿ ಒಂದಾಗಿಸಿಕೊಂಡ ಪರಿ; ಇಂದಿನ ಹೋರಾಟದ ಮುಂದಾಳುಗಳ ನಿಲುವಾಗಬೇಕೆಂಬ ಆಶಯ ನಾಟಕದಲ್ಲಿ ವ್ಯಕ್ತವಾಗಿದೆ. ಶರಣರ ಇತಿಹಾಸ, ವಿಚಾರಧಾರೆ ಹಾಗೂ ಜೀವಪರ ಮೌಲ್ಯಗಳನ್ನು ಇಂದಿನ ಸಮಕಾಲೀನ ಸಮಾಜಕ್ಕೆ ತಲುಪಿಸುವ ಕಾರ್ಯವಾಗಿದೆ. ಶರಣರ ಮೌಲ್ಯಗಳ ಮರುಚಿಂತನೆಯನ್ನು ವರ್ತಮಾನದ ನೆಲೆಗಟ್ಟಿನಲ್ಲಿ ಮಾಡಿರುವುದರಿಂದ ನಾಟಕವು ಅತ್ಯಂತ ಪ್ರಸ್ತುತವಾಗಿದೆ.

**ಕೊನೆ ಟಿಪ್ಪಣಿಗಳು**

1. ಬಸವರಾಜ ಸಬರದ : ಮತ್ತೆ ಕಲ್ಯಾಣ, ಪು.ಸಂ.04
2. ಅದೇ, ಪು.ಸಂ.06
3. ಅದೇ, ಪು.ಸಂ.38
4. ಅದೇ, ಮುನ್ನುಡಿ
5. ಅದೇ, ಪು.ಸಂ.45

**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಬರದ. (2025). *ಮತ್ತೆ ಕಲ್ಯಾಣ.* ಕ್ರಿಯಾ ಪ್ರಕಾಶನ.
- ಇಂಡಿ, ಕೆ.ಎಂ. (2005). ಶರಣರ ಕುರಿತು ನಾಟಕಗಳು–ಒಂದು ಅಧ್ಯಯನ (ಸಂಶೋಧನಾ ಪ್ರಬಂಧ): ಕ.ವಿ.ವಿ.
- ಪೋತೆ, ಎಚ್.ಟಿ. (ಸಂ.). (2017). *ಸಬರದ ಸಾಹಿತ್ಯ ಸಮೀಕ್ಷೆ.* ಶ್ರೀಸಿದ್ದಲಿಂಗೇಶ್ವರ ಪ್ರಕಾಶನ ಸರಸ್ವತಿ
- ರಮ್ಯಾ. (2021). *ಬಸವರಾಜ ಸಬರದ ಅವರ ನಾಟಕಗಳ ಅಧ್ಯಯನ (ಸಂಶೋಧನಾ ಪ್ರಬಂಧ).* ಮೈಸೂರು ವಿಶ್ವವಿದ್ಯಾನಿಲಯ.
- ವಿಜಯಶ್ರೀ ಸಬರದ. (2015). *ನಡೆದದ್ದೇ ದಾರಿ (ಸಬರದ ಸಾಹಿತ್ಯ ಸೂಚಿ).* ಪಲ್ಲವಿ ಪ್ರಕಾಶನ.